ಸಿಗದಿದ್ದರೆ ಒಂದು ಒಳ್ಳೆಯ ಸಮಾಜ ನಿರ್ಮಾಣವಾಗಲು ಸಾಧ್ಯವಾಗುವುದಿಲ್ಲ. ಸರ್ಕಾರಿ ಶಾಲೆಗಳಿರಬಹುದು. ಆದರೂ ಇವತ್ತು ಒಂದು ಒಳ್ಳೆಯ educationಗೆ private institutionಗೆ ಹೋಗಬೇಕಾಗುತ್ತದೆ.

ಅಧ್ಯಕ್ಷರು : ಸದಸ್ಯರೇ, ನೇರವಾಗಿ ಪ್ರಶ್ನೆ ಕೇಳಿ. ಈ ರೀತಿ ಭಾಷಣ ಮಾಡಲು ನಾನು ಬಿಡುವುದಿಲ್ಲ. ಏನಾಗಬೇಕು ಎಂದು ನೇರವಾಗಿ ಹೇಳಬಿಡಿ. ಪ್ರಶ್ನೋತ್ತರ ಕಾಲದಲ್ಲಿ ಭಾಷಣ ಮಾಡಲಿಕ್ಕೆ ಅವಕಾಶ ಕೊಡವುದಿಲ್ಲ. ಏನಾಗಬೇಕು ಎಂದು ನೇರವಾಗಿ ಕೇಳಿ. ನನು ಹೇಳಿದಂಥ schemeಅನ್ನು includeಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅವರು ಕೇಳುತ್ತಿರತಕ್ಕಂಥಾದ್ದು ಎರಡನೇ ಪ್ರಶ್ನೆ. ಮೊದಲನೆಯದು ಏನೆಂದರೆ, ಈ ಯೋಜನೆಯನ್ನು ಹೆಣ್ಣುಮಕ್ಕಳಿಗೂ ಕೂಡ ಅನ್ವಯಿಸಬೇಕು ಮತ್ತು ಅವರ educationಗೆ ಸಹಾಯ ಮಾಡಬೇಕು ಎನ್ನುವುದು. Housing Scheme ಇದರಲ್ಲಿ include ಮಾಡಿ ಎನ್ನುವುದು ಇನ್ನೊಂದು. ಇವೆರಡನ್ನೂ ಈ schemeನಲ್ಲಿ ತಂದರೆ ಉಪಯೋಗವಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಕೇಳುತ್ತಿದ್ದಾರೆ. ಅದಕ್ಕಾಗಿ, ದಯವಿಟ್ಟು ಇವೆರಡಕ್ಕೂ ಉತ್ತರ ಕೊಡಬೇಕು.

ಪ್ರೊ.ಡಾ॥ ಮುಮ್ತಾಜ್ ಅಲಿ ಖಾನ್ : ಮುಕ್ತ ಮನಸ್ಸಿನಿಂದ ನಿಮ್ಮ ಸಲಹೆಗಳನ್ನು ಈ ವರ್ಷದಿಂದ ಅನುಷ್ಠಾನಕ್ಕೆ ತರುತ್ತೇವೆ.

(177) **ಶ್ರೀ ನಾಯ್ಕ್ ಜೆ.ಡಿ. (ಭಟ್ಕಳ) :-- ಮಾನ್ಯ** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭಟ್ಕಳದ ಸರ್ಕಾರಿ ಆಸ್ಪತ್ರೆಗೆ ಯಾವ ಯೋಜನೆಯಡಿ ಹೊಸ ಕಟ್ಟಡ ಕಟ್ಟಲಾಗುತ್ತಿದೆ

ಆ) ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು ;

ಇ) ಕಟ್ಟಡ ಗುಣಮಟ್ಟವನ್ನು ಪರೀಕ್ಷಿಸುವವರು ಯಾರು (ವಿವರ ನೀಡುವುದು)?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಉತ್ತರ ಕನ್ನಡ ಜಿಲ್ಲೆ ಭಟ್ಕಳದ ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು (50 ಹಾಸಿಗೆಗಳಿಂದ 100 ಹಾಸಿಗೆಗಳ ಸಾಮರ್ಥ್ಯಕ್ಕೆ) ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು ರಾಜ್ಯ ಯೋಜನೆ ಕಾರ್ಯಕ್ರಮಗಳ ಲೆಕ್ಕಶೀರ್ಷಿಕೆ 4210–0–1–110–1–01–139 (ಪ್ರಧಾನ ಕಾಮಗಾರಿಯ) ಅಡಿಯಲ್ಲಿ ಕೈಗೊಳ್ಳಲಾಗಿದೆ.

ಆ) ಕಾಮಗಾರಿಯ ಅಂದಾಜು ಮೊತ್ತ ರೂ. 244.00 ಲಕ್ಷಗಳು.

ಇ) ಈ ಕಾಮಗಾರಿ ಉಸ್ತುವಾರಿಯಲ್ಲಿ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ

ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ ಪ್ರಾಯೋಜನೆ ವಿಭಾಗ, ಧಾರವಾಡ ರವರು ನಿರ್ವಹಿಸುತ್ತಿದ್ದಾರೆ. ಕಟ್ಟಡದ ಗುಣಮಟ್ಟವನ್ನು ಪರೀಕ್ಷಿಸಲು ತಟಸ್ಥ ಗುಣನಿಯಂತ್ರಣ ಸಂಸ್ಥೆಯಾದ ಮೆ: ಕರ್ನಾಟಕ ಟೆಸ್ಟಿಂಗ್ ಹೌಸ್, ಬೆಂಗಳೂರು ರವರು ನಿರ್ವಹಿಸುತ್ತಾರೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ ಪ್ರಾಯೋಜನೆ ವಿಭಾಗ, ಧಾರವಾಡ ರವರು ಮೊದಲನೆ ಗುಣ ನಿಯಂತ್ರಕರಾಗಿರುತ್ತಾರೆ.

ಶ್ರೀ ನಾಯ್ಕ ಜೆ.ಡಿ. : ಭಟ್ಕಳದ ಸರ್ಕಾರಿ ಆಸ್ಪತ್ರೆಗೆ ಹೊಸ ಕಟ್ಟಡವನ್ನು ಕಟ್ಟಿಸುತ್ತಿದ್ದಾರೆ. ಅದನ್ನು ಯಾವ ಯೋಜನೆಯಲ್ಲಿ ಕಟ್ಟಿಸುತ್ತಿದ್ದೀರಿ ? ಅದಕ್ಕೆ ತಗಲತಕ್ಕಂಥ ಅಂದಾಜು ವೆಚ್ಚ ಎಷ್ಟು ? ಮತ್ತು ಆ ಕಟ್ಟಡದ ಗುಣಮಟ್ಟವನ್ನು ಪರೀಕ್ಷೆ ಮಾಡತಕ್ಕವರು ಯಾರು ? ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ನಾನು ಏಕೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ ಎಂದರೆ, 1997–98ರಲ್ಲಿ ಇದೇ ಆಸ್ಪತ್ರೆಯನ್ನು 50 ಹಾಸಿಗೆಗೆ ಮೇಲ್ದರ್ಜೆಗೇರಿಸಿ ಸುಮಾರು 40 ಲಕ್ಷ ರೂಪಾಯಿಗಳ ವೆಚ್ಚದಲ್ಲಿ K.H.S.D.P. ಯಿಂದ ಕಟ್ಟಡ ಕಟ್ಟಿಸಿದ್ದಾರೆ. 1997–98ರಲ್ಲಿ ಕಟ್ಟಿದ ಈ ಕಟ್ಟಡ ಈಗಾಗಲೇ ಅಂದರೆ, 2007–08ರಲ್ಲಿ ಸೋರುತ್ತಿದೆ. ಅಲ್ಲಿ ಡಾಕ್ಟರ್‌ಗಳೂ ಉಳಿಯಲಿಕ್ಕೆ ಆಗುತ್ತಿಲ್ಲ. ಯಾವುದೇ ಪೇಷೆಂಟ್‌ಗಳೂ ಕೂಡ ಅಲ್ಲಿ ಮಲಗಲಿಕ್ಕೆ ಆಗದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಅಲ್ಲಿ 2.44 ಕೋಟಿ ರೂಪಾಯಿಗಳಲ್ಲಿ ಕಟ್ಟಡ ಕಟ್ಟುತ್ತಿದ್ದು ಅದರ ಗುಣಮಟ್ಟದ ಜವಾಬ್ದಾರಿಯನ್ನು ಯಾರು ನೋಡುತ್ತಿದ್ದಾರೆ ? ಈ ರಾಜ್ಯದಲ್ಲಿ quality control ಎನ್ನುವ ಇಲಾಖೆ ಇದೆಯೋ, ಇಲ್ಲವೋ ಎನ್ನುವ ಸಂಶಯ ನಮಗೆ ಬರುತ್ತಿದೆ. ಯಾವುದೇ ಒಂದು ಸರ್ಕಾರಿ ಕಟ್ಟಡವನ್ನು ಕಟ್ಟುವಾಗ ಮೊದಲಿನಿಂದಲೇ ಅದರ ಗುಣಮಟ್ಟವನ್ನು ಪರೀಕ್ಷೆ ಮಾಡಿ, ಕಟ್ಟಡ ಕಟ್ಟಲಿಕ್ಕೆ ಅವಕಾಶ ಮಾಡಿಕೊಟ್ಟರೆ ಒಂದು ಒಳ್ಳೆಯ ಕಟ್ಟಡ ಕಟ್ಟಲಿಕ್ಕೆ ಆಗುತ್ತದೆ. ಆದರೆ ಇಲ್ಲಿ ಹಾಗೆ ಆಗುತ್ತಿಲ್ಲ. 1997–98ರಲ್ಲಿ ಕಟ್ಟಿದ ಈ ಕಟ್ಟಡಕ್ಕೆ 2000ದ ಇಸವಿಯಲ್ಲಿ ಕಬ್ಜ ತೆಗೆದುಕೊಳ್ಳುವಾಗ ಇಲಾಖೆಯವರು ಕಬ್ಜ ತೆಗೆದುಕೊಳ್ಳಬಾರದು ಎಂದು ತಕರಾರು ಮಾಡಿದರು. ತಕರಾರು ಮಾಡಿದ ಮೇಲೆ ಅದಕ್ಕೆ ಹಂಚಿನ ಹೊದಿಕೆಯನ್ನು ಮಾಡಿಕೊಟ್ಟರು. ಆದರೂ ಕೂಡ ಆ ಕಟ್ಟಡ ಸರಿಯಾಗಿ ಆಗಿಲ್ಲ. ಮಳೆಗಾಲದಲ್ಲಿ ಆ ಕಟ್ಟಡ ಸೋರುತ್ತಿದ್ದು, ಅಲ್ಲಿ ನಿಲ್ಲುವ ನೀರು ಮಳೆಯ ನೀರೋ ಅಥವಾ ನೀರಿನ ಹೊಂಡವೋ ಎಂದು ಗೊತ್ತಾಗದಂತೆ ಆಗಿದೆ. ದಯಮಾಡಿ, ಈಗ ಕಟ್ಟುತ್ತಿರುವ ಕಟ್ಟಡವನ್ನು ಒಳ್ಳೆಯ ರೀತಿಯಿಂದ, ಗುಣಮಟ್ಟದ ಕಟ್ಟಡ ಕಟ್ಟುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ನಾನು ತಮ್ಮ ಮೂಲಕ ಮಂತ್ರಿಗಳಲ್ಲಿ ಕೇಳಲಿಕ್ಕೆ ಬಯಸುತ್ತಿದ್ದೇನೆ.

ಶ್ರೀ ಬಿ. ಶ್ರೀರಾಮುಲು : ಗುಣಮಟ್ಟದ ಕಟ್ಟಡ ಆಗಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಕಾಂಟ್ರಾಕ್ಟನ್ನು Nagarjuna Construction Companyಗೆ

ಒದಗಿಸಲಾಗಿದೆ. ಮೆಃ ಕರ್ನಾಟಕ ಟೆಸ್ಟಿಂಗ್ ಹೌಸ್, ಬೆಂಗಳೂರು ಇವರಿಗೆ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲನೆ ಮಾಡಬೇಕೆಂದು ಹೇಳಿ ವ್ಯವಸ್ಥೆಯನ್ನು ಮಾಡಿದ್ದೇವೆ. Nagarjuna Construction Company ಮತ್ತು ಕರ್ನಾಟಕ ಟೆಸ್ಟಿಂಗ್ ಹೌಸ್‌ರವರ ಜೊತೆಯಲ್ಲಿ ಮಾತನಾಡಿ ಆದಷ್ಟು ಬೇಗ ಈ ಕಾಮಗಾರಿ ಒಳ್ಳೆಯ ರೀತಿಯಲ್ಲಿ ಆಗಬೇಕೆಂದು ಹೇಳುತ್ತೇವೆ. ಈಗಾಗಲೇ ಕಟ್ಟಿರುವ ಕಟ್ಟಡ ಕಳಪೆ ಕಾಮಗಾರಿಯದ್ದಾಗಿದೆ, ಕಟ್ಟಡ ಸೋರುತ್ತಿದೆ ಎನ್ನುವ ಪ್ರಸ್ತಾವನೆ ಮಾಡಿದ್ದಾರೆ. ಅದರ ಬಗ್ಗೆ ನಾವು ಎಲ್ಲಾ ರೀತಿಯಲ್ಲಿಯೂ ಕೂಡ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈಗಿನ ಕಾಮಗಾರಿಗೆ ಏನು ಹಣವನ್ನು ಬಿಡುಗಡೆ ಮಾಡಬೇಕು ಅದನ್ನು ಆದಷ್ಟು ಬೇಗನೆ ಬಿಡುಗಡೆ ಮಾಡಿ ಆದಷ್ಟು ಬೇಗ ಈ ಕಾಮಗಾರಿಯನ್ನು ಮುಗಿಸಿಕೊಡತ್ತೇವೆ ಎಂದು ಮಾನ್ಯ ಸಭಾಧ್ಯಕ್ಷರ ಮೂಲಕ ನಾನು ತಿಳಿಸುತ್ತೇನೆ.

ಶ್ರೀ ನಾಯ್ಕ ಜೆ.ಡಿ. : Nagarjuna Construction Company ಯವರು ಇದರ tender ತೆಗೆದುಕೊಂಡು ಕಟ್ಟಡದ ಕೆಲಸ ಮಾಡುತ್ತಿದ್ದಾರೆ ಎಂದು ಉತ್ತರ ಹೇಳಿದ್ದಾರೆ. ಆದರೆ, practical ಆಗಿ ಅವರು ಕೆಲಸ ಮಾಡುತ್ತಿಲ್ಲ. ಯಾರೋ ಬೇರೆಯವರಿಗೆ sub-lease ಮೇಲೆ ಕೊಡತಕ್ಕಂಥ ವ್ಯವಸ್ಥೆಯಾಗಿದೆ. Quality control ನವರು ಅಲ್ಲಿ ಬರುತ್ತಲೇ ಇಲ್ಲ, ಅವರು ಅಲ್ಲಿಗೆ ತಲೆಯನ್ನೇ ಹಾಕುತ್ತಿಲ್ಲ. ಸಂಬಂಧಪಟ್ಟಂತ ಗುತ್ತಿಗೆದಾರ ಯಾರಿದ್ದಾನೆ ಅವನು ಅದನ್ನು ಹಾಗೆಯೇ manage ಮಾಡಿಕೊಂಡು, ಕಟ್ಟಡ ಪೂರ್ತಿಯಾದಾಗ ಅದರ ಕಬ್ಜ ಕೊಡುವುದು, possession ಕೊಡುವುದು ಮಾಡುವಾಗ ಬರುತ್ತಾರೆಯೇ ಹೊರತಾಗಿ ಬೇರೆ ಸಂದರ್ಭಗಳಲ್ಲಿ ಬರುವುದಿಲ್ಲ. ಆಗಿಂದ್ದಾಗೆ, ಅಂದರೆ stage wise ಅದನ್ನು quality control ನವರು ಪರಿಶೀಲನೆ ಮಾಡುವಂಥ ವ್ಯವಸ್ಥೆಯಾಗಬೇಕು. ಹಾಗೆ ಮಾಡದಿದ್ದರೆ, ಆ ಕಟ್ಟಡ ಕಳಪೆಯಾದರೂ ಅದನ್ನು ನೋಡುವುದಕ್ಕೆ ಅಲ್ಲಿ ಯಾರೂ ಇರುವುದಿಲ್ಲ. ಹಾಗಾದರೆ ಸರ್ಕಾರದ ಹಣ ಪೋಲಾಗುತ್ತದೆ. ಹಂತಹಂತವಾಗಿ, foundation, ಗೋಡೆ, slab, plastering ಹೀಗೆ ಎಲ್ಲವನ್ನೂ quality control test ಮಾಡಿದರೆ ಮಾತ್ರ ಉತ್ತಮ ಗುಣಮಟ್ಟದ ಕಟ್ಟಡವಾಗುತ್ತದೆ. ಅದಕ್ಕಾಗಿ ನಾನು ಮಂತ್ರಿಗಳಲ್ಲಿ ನಿವೇದನೆ ಮಾಡುತ್ತೇನೆ, ಒಳ್ಳೆಯ ಕಟ್ಟಡ ಆಗಬೇಕು ಎಂದರೆ quality control ಕೆಲಸ ಬಹಳ ಮುಖ್ಯ ಎಂದು ಹೇಳಲಿಕ್ಕೆ ಇಷ್ಟಪಡುತ್ತಿದ್ದೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆದಷ್ಟು ಬೇಗ ನಾನು ಆ ಕಟ್ಟಡದ ಬಗ್ಗೆ ಪರಿಶೀಲನೆ ಮಾಡಿ, ಯಾವ ರೀತಿ ಕಳಪೆ ಕಾಮಗಾರಿಯಾಗಿದೆ ಎನ್ನುವುದನ್ನು ನೋಡಿ, quality contol agencyಯಾದ ಕರ್ನಾಟಕ

ಟೆಸ್ಟಿಂಗ್ ಹೌಸ್‌ರವರಿಗೆ ವಹಿಸಿ ಕೊಟ್ಟಿರುವುದನ್ನು stage by stage ನೋಡಬೇಕೆಂದು ಹೇಳುತ್ತೇವೆ. ಅದು basement ಆಗಿರಬಹುದು, basement ಆದನಂತರ ಆಗಿರುವ ಕಟ್ಟಡವಾಗಿರಬಹುದು, R.C.C. ಆಗಿರಬಹುದು, ಹೀಗೆ ಎಲ್ಲಾ ರೀತಿಯಲ್ಲಿಯೂ ಪರಿಶೀಲನೆ ಮಾಡಿ, Nagarjuna Construction Company ಯವರಿಗೆ ನಾನು ಸೂಚನೆಯನ್ನು ನೀಡಿ, ಕಟ್ಟಡದ qualityಯನ್ನು ಚೆನ್ನಾಗಿ ನೋಡಿಕೊಳ್ಳಬೇಕು, ಜೊತೆಗೆ ಆದಷ್ಟು ಬೇಗನೆ ಕಟ್ಟಡವನ್ನು ಮುಗಿಸಿಕೊಡಬೇಕು ಎನ್ನುವ ವಿಷಯವನ್ನು ತಿಳಿಸಿ, ಆದಷ್ಟು ಬೇಗನೆ ಕಾಮಗಾರಿಯನ್ನು ಮುಗಿಸಿ, ತಮಗೆ ವಿಷಯವನ್ನು ನಾನು ತಿಳಿಸುತ್ತೇನೆ ಎಂದು ಮಾನ್ಯ ಸಭಾಧ್ಯಕ್ಷರ ಮೂಲಕ ನಾನು ತಿಳಿಸುತ್ತೇನೆ.

ಅಧ್ಯಕ್ಷರು : ಡೆರಿಕ್‌ರವರೇ ತಮ್ಮ ಪ್ರಶ್ನೆ ಬೇರೆ ಇಲಾಖೆಗೆ ವರ್ಗಾವಣೆಯಾಗಿದೆ. ಆದ್ದರಿಂದ, ನಿಮ್ಮ ಪ್ರಶ್ನೆಗೆ ಅವಕಾಶವನ್ನು next week ಕೊಡುತ್ತೇನೆ. ಮುಂದಿನ ಪ್ರಶ್ನೆ ಖಮರುಲ್ ಇಸ್ಲಾಂರವರದ್ದು.

(172) ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ ಉತ್ತರ) :– ಮಾನ್ಯ ಕಾರ್ಮಿಕ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) 2007–08ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಯಂತ್ರೋಪಕರಣ, ಪೀಠೋಪಕರಣ, ಕಂಪ್ಯೂಟರ್, ಹಾಗೂ ಉಪಕರಣಗಳ ಖರೀದಿಗಾಗಿ ಖರ್ಚು ಮಾಡಿದ ಮೊತ್ತದ ವಿವರ ;

ಆ) 2007–08ನೇ ಸಾಲಿನಲ್ಲಿ ಸಿ.ಒ.ಇ. ಐಟಿಐಗಳಿಗೆ ಯಂತ್ರೋಪಕರಣ, ಪೀಠೋಪಕರಣ, ಕಂಪ್ಯೂಟರ್ ಹಾಗೂ ಉಪಕರಣಗಳ ಖರೀದಿಗಾಗಿ ಖರ್ಚು ಮಾಡಿದ ಮೊತ್ತದ ವಿವರ ; (ಐಟಿಐ ವಾರು ವಿವರ ಒದಗಿಸುವುದು)

ಇ) ಮೇಲಿನ ಖರೀದಿಗಳಿಗೆ ಸಂಬಂಧಿಸಿದ ಖರೀದಿ ಅನುಸೂಚಿಯ ಪ್ರತಿಗಳನ್ನು ಒದಗಿಸುವುದು ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):–

ಅ) ಸಂಸ್ಥೆವಾರು ಪಟ್ಟಿ ಲಗತ್ತಿಸಿದೆ (ಅನುಬಂಧ–1)

ಆ) ಸಂಸ್ಥೆವಾರು ಪಟ್ಟಿ ಲಗತ್ತಿಸಿದೆ (ಅನುಬಂಧ–2)

ಇ) ಸಂಸ್ಥೆವಾರು ಪಟ್ಟಿ ಲಗತಿಸಿದೆ (ಅನುಬಂಧ–3)